ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ.

17(48) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರದ ಧಾರಣಾ ಸಾಮರ್ಥ್ಯವನ್ನು ಆಳೆಯದೇ ಬೃಹತ್ ಕೈಗಾರಿಕೆಗಳಿಗೆ ಅನುಮತಿ ನೀಡಲಾಗುವುದಿಲ್ಲವೆಂದು ಸರ್ಕಾರ ಈ ಹಿಂದೆ ನಿರ್ಧರಿಸುರುವುದು ನಿಜವೇ?

ಆ) ಹಾಗಿದ್ದಲ್ಲಿ ಪರಿಸರ ಧಾರಣಾ ಸಾಮರ್ಥ್ಯ ಕುರಿತು ಕೈಗಾರಿಕೆಗಳನ್ನು ನಿಗಧಿಪಡಿಸಲು ಸರ್ಕಾರ ಕೈಗೊಂಡಿರುವ ಸಮೀಕ್ಷಣಾ ವರದಿಯ ಕ್ರಮದ ವಿವರಗಳೇನು?

ಇ) ಕಳೆದ 6 ತಿಂಗಳಿಂದೀಚೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ವಿವಿಧ ಕೈಗಾರಿಕೆಗಳಿಗೆ ಸಚಿವ ಸಂಪುಟ ಅನುಮೋದನೆ ನೀಡಿರುತ್ತದೆ. (ಕೈಗಾರಿಕಾವಾರು ಹಾಗೂ ಸ್ಥಳವಾರು ವಿವರ ನೀಡುವುದು).

ಶ್ರೀ ಬಿ.ಎಲ್. ಶಂಕರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಧಾರಣಾಶಕ್ತಿ ಅಧ್ಯಯನವನ್ನು ಕುರಿತಂತೆ ಸಲಹೆಗಳನ್ನು ನೀಡಲು ಡಾ: ಮಾಧವ್‌ಗಡ್ಗೀಲ್ ಅಧ್ಯಕ್ಷತೆಯಲ್ಲಿ ದಿ:25-3-97ರಂದು ಸರ್ಕಾರವು ಸಮಿತಿಯನ್ನು ರಚಿಸಿರುತ್ತದೆ. ಡಾ: ಮಾಧವ್‌ಗಡ್ಗೀಲ್‌ರವರು ಇದೇ ವಿಷಯವನ್ನು ಕುರಿತಂತೆ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು ಪ್ರೊ: ಡಿ.ಕೆ. ಸುಬ್ರಹ್ಮಣ್ಯಂರ ಅಧ್ಯಕ್ಷತೆಯಲ್ಲಿ ದಿ: 22-10-97 ರಂದು ಉಪ ಸಮಿತಿಯನ್ನು ರಚಿಸಿರುತ್ತಾರೆ. ದಿ:7-3-98ರಂದು ಪ್ರೊ: ಸುಬ್ರಹ್ಮಣ್ಯಂರವರಿಂದ ತಯಾರಿಸಲಾದ ವರದಿಯನ್ನು ಸ್ವೀಕರಿಸಲಾಗಿದ್ದು ಈ ವರದಿಯಲ್ಲಿ ಧಾರಣಾ ಶಕ್ತಿಯ ಅಧ್ಯಯನವನ್ನು ನಡೆಸಲು ಅನುಸರಿಸಬೇಕಾದ ಕ್ರಮಗಳನ್ನು ಕುರಿತಂತೆ ಸಲಹೆಗಳನ್ನು ನೀಡಲಾಗಿದೆ. ವರದಿಯಲ್ಲಿ ಸೂಚಿಸಲಾಗಿರುವ ಕಾರ್ಯವಿಧಾನಗಳ ಪ್ರಕಾರ ಅಧ್ಯಯನ ಕೈಗೊಳ್ಳಲು ಸಮರ್ಥವಾದ ಏಜೆನ್ಸಿಯನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.

ಇ) ಇಂಡೋರಮಾ ಸಿಂಥೆಟಿಕ್ಸ್‌ರವರ ಪಿಟಿಎ ಮತ್ತು ಪಾಲಿಯಸ್ಟರ್ ಯೋಜನೆಗೆ ಕುಳಾಯಿ ಮತ್ತು ತೋಕೂರಿನಲ್ಲಿ ಸ್ಥಾಪನೆ ಮಾಡಲು ತತ್ವತ: ಒಪ್ಪಿಗೆ ನೀಡಲಾಗಿದೆ.